


# ಒಂದು ಮುಂಜಾವಿನಲಿ...

– 6ನೇ ಪುಟದಿಂದ

ಇಂತಹ ಒಂದು ಮುಂಜಾವಿನಲಿ ಸೂರ್ಯ ಕಣ್ತೆರೆಯಲು ಹರಸಾಹಸ ಮಾಡುತ್ತಿದ್ದಾಗ ಛತ್ರಿ ಹಿಡಿದು ಕ್ಯಾಮೆರಾ ಬ್ಯಾಗನ್ನು ಪ್ಲಾಸ್ಟಿಕ್ ಕವರಿನಲ್ಲಿ ಸುತ್ತಿಕೊಂಡು ಎದೆಗೊತ್ತಿ ಹಿಡಿದು ಮನೆಯಿಂದ ಹೊರಬಿದ್ದು ಬೆಟ್ಟದ ತಪ್ಪಲಿನ ದಿಣ್ಣೆಗೆ ಬರುವ ವೇಳೆಗೆ ನೇಸರ, ವರುಣರು ತಮ್ಮ ಸಾಮ್ರಾಜ್ಯ ಸ್ಥಾಪಿಸಲು ಹೆಣಗಾಡುತ್ತಿದ್ದರು. ನೇಸರನ ಹೊಳಪಿಗೆ, ವರುಣನ ಜಳಕಕ್ಕೆ ನಿಸರ್ಗ ಪುಳಕಗೊಂಡಿತ್ತು.

ಕ್ಯಾಮೆರಾದಲ್ಲಿ ಸೆರೆ ಸಿಕ್ಕ ಮಳೆಗಾಲದ ಚಿತ್ರಗಳಿಗೆ ಕಂಪ್ಯೂಟರಿನ ಪರದೆಯ ಮೇಲೆ ಮರುಜೀವ ನೀಡಿ ಎಡಿಟ್ ಮಾಡುತ್ತಾ ಕುಳಿತಿದ್ದಾಗ ನನಗಿಷ್ಟವಾದ "ಒಂದು ಮುಂಜಾವಿನಲಿ ತುಂತುರಿನ ಸೋನೆ ಮಳೆ..."ಎಂಬ ಭಾವಗೀತೆಯನ್ನು ಕೇಳುತ್ತಿದ್ದೆ.

ಮಳೆ ಧೋ ಎಂದು ಸುರಿಯುತ್ತಿತ್ತು. ನಾನು ನಿಂತಿದ್ದು ಕುಪ್ಪಳ್ಳಿ ಬಯಲಿನ ಸ್ಮಶಾನದಲ್ಲಿ. ಇಲ್ಲಿರುವ ಹಳೆಯ ಮುತ್ತುಗದ ಮರಗಳು ಪ್ರತಿವರ್ಷವೂ ಈ ವೇಳೆಯಲ್ಲಿ ಆರ್ಕಿಡ್ ಹೂವನ್ನು ಗೊಂಚಲು ಗೊಂಚಲಾಗಿ ಮುಡಿದು ಸಿಂಗರಿಸಿಕೊಂಡಿರುತ್ತವೆ. ಮಳೆ ಜೋರಾಗಿದ್ದರಿಂದ ಮರದ ಅಡಿಯಲ್ಲಿ ಛತ್ರಿ ಹಿಡಿದು ನಿಂತಿದ್ದೆ. ದೂರದಲ್ಲಿ ಗದ್ದೆ ಬಯಲು, ಕುಪ್ಪಳ್ಳಿ ಹೊಳೆ ದಾಟಿ ಕುಪ್ಪಳ್ಳಿ ಊರು ಕಾಣುತ್ತಿತ್ತು. ಮಳೆಯಲ್ಲಿ ಮುದುಡಿ ಮಲಗಿದಂತೆ ಕಾಣುತ್ತಿದ್ದ ಈ ಊರಿನ ಚಿತ್ರ ತೆಗೆದಿದ್ದೆ.

ನಾನು ನಿಂತ ಬಯಲಿನಿಂದ ಎಡಭಾಗಕ್ಕೆ ದಿಣ್ಣೆ ಹಬ್ಬುತ್ತಾ ಸಾಗಿತ್ತು.ಸುತ್ತಲೂ ಮರಗಿಡಗಳಿಂದ ಸುತ್ತುವರೆದ ಹುಲ್ಲುಗಾವಲಿನಲ್ಲಿ ಆಗಷ್ಟೇ ಮೂಡಿದ ಹುಲ್ಲು, ದಟ್ಟನೆಯ ಧೂಮದಲ್ಲಿ ಮಿಂದ ಪ್ರಕೃತಿ ಸೊಗಸಾಗಿ ಕಾಣುತ್ತಿತ್ತು.

ಎಡಬದಿಗೆ ಮುಗಿಲು ಚುಂಬಿಸುವ ಬೆಟ್ಟ ಸಾಲಿತ್ತು. ಒಮ್ಮೆ ಮಳೆ ನಿಂತು, ಒಂದಷ್ಟು ಬಿಸಿಲು ಚೆಲ್ಲಿದ ಬಳಿಕ ಮತ್ತೆ ಮಳೆಮೋಡಗಳ ಸವಾರಿ ಬೆಟ್ಟವೇರಿದಾಗ ಅಲ್ಲೊಂದು ಅಪೂರ್ವ ಸೊಗಸಿತ್ತು.

ಸ್ವಲ್ಪಹೊತ್ತಿನ ಬಳಿಕ ಮಳೆ ನಿಂತು ಹೋದ ಮೇಲೆ ಈ ಸ್ಮಶಾನದ ತುಂಬಾ ಅಡ್ಡಾಡುತ್ತಾ ಆರ್ಕಿಡ್‌ಗಳ ಹುಡುಕಾಟದಲ್ಲಿದ್ದೆ.ಆಗ ಅಲ್ಲಿ ಬೆಳೆದಿದ್ದ ಕಾಡುಗಿಡದ ಮೇಲೆ ನಿಂತಿದ್ದ ನೀರಹನಿಗಳು ಎಳೆಬಿಸಿಲಿನಲ್ಲಿ ಹೊಳೆಯುತ್ತಾ ಮನಸೆಳೆದವು.

ಮಳೆ ಭೂಮ್ಯಾಕಾಶಗಳನ್ನು ಒಂದು ಮಾಡುವಂತೆ ಸುರಿಯತೊಡಗಿತು. ಮತ್ತೆ ಮುತ್ತುಗದ ಮರದಡಿಯಲ್ಲಿ ಆಶ್ರಯ ಪಡೆದಿದ್ದೆ. ಮುತ್ತುಗದ ಮರದ ಅಂಚಿನ ಎಲೆಯ ಮಳೆಯ ನೀರು ಒಂದೇ ಸಮನೆ ಸುರಿಯುತ್ತಿದ್ದುದರಿಂದ ಎಲೆಗಳು ದೊರ್ರ...ಬರ ಎಂದು ಸದ್ದು ಮಾಡುತ್ತಿದ್ದವು. ಎತ್ತರದ ಕೊಂಬೆಯ ಎಲೆಗಳಿಂದ ನೀರು ಜಾರುತ್ತಾ ಒಳಬದಿಯ ಎಲೆಯ ಮೇಲೆ ಹನಿಹನಿಯಾಗಿ ನಿಧಾನವಾಗಿ ಇಳಿದು ಧರೆ ಸೇರುತ್ತಿದ್ದವು. ಹೀಗೆ ಮುಂಗಾರು ಮಳೆಯ ಲೀಲೆಯನ್ನು ಅದೆಷ್ಟು ಹೊತ್ತು ನೋಡುತ್ತಾ ನಿಂತಿದ್ದೆನೋ ನನಗೇ ಅರಿವಿಲ್ಲ.

